ಗಳನ್ನಾಗಲೀ ಕೋಡಲು ಸರ್ಕಾರದ ಅಭ್ಯಂತರ ಇಲ್ಲವೆಂದು ದಿನಾಂಕ. ೧೭-೨-೧೯೮೬ರ ಸರ್ಕಾರದ ಆದೇಶದಲ್ಲಿ ಈಗಾಗಲೇ ತಿಳಿಸಲಾಗಿದೆ. ದಿನಾಂಕ. ೩೦-೧-೧೯೮೬ರ ಸರ್ಕಾರದ ಸುತ್ತೋಲೆಯಲ್ಲಿ, ನದಿ. ಹಳ್ಳ ಇತ್ಯಾದಿ ಆಸರೆಗಳಿಂದ ಏತ ನೀರಾವರಿಗಾಗಿ ಅನುಮತಿ ನೀಡುವ ಅಧಿಕಾರವನ್ನು ಸಂಬಂಧಿಸಿದ ಕಾರ್ಯ ನಿರ್ವಾಹಕ ಇಂಜಿನಿಯರ್‌ರವರಿಗೇ ನೀಡಲಾಗಿದೆ. ಮಾನ್ಯ ಶಾಸಕರು ಹಿರಿಯೂರಿನಲ್ಲಿ ಒಂದು ಹೊಸ ಉಪ ವಿಭಾಗದ ಕಛೇರಿಯನ್ನು ಆರಂಭಿಸಬೇಕೆಂದು ಕೋರಿದ್ದಾರೆ. ಈ ಹೊಸ ಉಪ ವಿಭಾಗದ ಕಛೇರಿಯನ್ನು ಆರಂಭಿಸುವ ಬಗ್ಗೆ ಕೆಲಸದ ಪ್ರಮಾಣವನ್ನು (ವರ್ಕ್ ಲೋಡ್) ಮತ್ತು ಹಣ ಕಾಸಿನ ಇತಿ ಮಿತಿಗಳನ್ನು ಗಮನಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

೨. ಬಂಟ್ವಾಳ ಬಿ. ಸಿ. ರೋಡಿನಲ್ಲಿರುವ ಹಳೆ ಬಸ್ ನಿಲ್ದಾಣವನ್ನು ನವೀಕರಿಸುವ ಬಗ್ಗೆ

ಶ್ರೀ ಬಿ. ಎ. ಉಮರಬ್ಬ (ವಿಟ್ಲ).— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲಾ ಬಂಟವಾಳ ತಾಲ್ಲೂಕು ಬಿ.ಸಿ. ರೋಡ್ ಒಂದು ಪ್ರಮುಖವಾದ ಸಂಚಾರಿ ಕೇಂದ್ರ, ಈ ಕೇಂದ್ರದ ಪೂರ್ವಕ ಬೆಂಗಳೂರಿಗೆ, ಮೈಸೂರಿಗೆ ಚಿಕ್ಕಮಗಳೂರಿಗೆ ಇತ್ಯಾದಿ ಪ್ರಮುಖ ಪಟ್ಟಣಗಳಿಗೆ ಹಾಗೂ ಅನೇಕ ಗ್ರಾಮಾಂತರ ಪ್ರದೇಶಗಳಿಗೆ ಸರ್ಕಾರಿ ಬಸ್ಸುಗಳು ಸಂಚರಿಸುತ್ತಿದ್ದು, ಸಾಮಾನ್ಯವಾಗಿ ಎಲ್ಲಾ ಬಸ್ಸುಗಳೂ ತನ್ನ ಒಂದು ನಿಲುಗಡೆಯನ್ನು ಬಿ.ಸಿ. ರೋಡ್ ಬಸ್ ನಿಲ್ದಾಣದಲ್ಲಿ ಮಾಡುತ್ತವೆ. ಈ ಬಸ್ ನಿಲ್ದಾಣ ಸದಾ ಅಪಾರ ಜನಸಂದಣಿಯಿಂದ ಕೂಡಿರುವುದು ಸರ್ವೆ ಸಾಮಾನ್ಯ ದೃಶ್ಯ. ಆದರೂ ಸಹ ಭಾರಿ ಹಳೆಯ ಕಾಲದ, ಯಾವ ವ್ಯವಸ್ಥೆಗಳೂ ಇಲ್ಲದ ಒಂದು ಚಿಕ್ಕ ಬಸ್ಸು ನಿಲ್ದಾಣ ಮಾತ್ರ ಇಲ್ಲಿ ಈಗಲೂ ಇದೆ.

ಈ ವಸ್ತು ಸ್ಥಿತಿಯನ್ನು ಮಾನ್ಯ ಸಾರಿಗೆ ಖಾಗೂ ವಸತಿ ರಾಜ್ಯ ಸಚಿವರ ಗಮನಕ್ಕೆ ತಂದು ಈ ಬಗ್ಗೆ ವಿಶೇಷ ಗಮನಹರಿಸಿ ಆಧ್ಯತೆಯ ಮೇರೆಗೆ ಬಿ.ಸಿ. ರೋಡ್‌ನಲ್ಲಿ ಒಂದು ನವೀನ ಹಾಗೂ ಸುಸಜ್ಜಿತವಾದ ಬಸ್ಸು ನಿಲ್ದಾಣವನ್ನು ನಿರ್ಮಿಸುವಂತೆ ಅತ್ಯಂತ ಕಳಕಳಿಯಿಂದ ಒತ್ತಾಯಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಸಚಿವರು).— ಮಾನ್ಯ ಅಧ್ಯಕ್ಷರೇ, ಬಿ.ಸಿ. ರೋಡ್‌ನಲ್ಲಿ ಬಸ್ ನಿಲ್ದಾಣ ಆಗತ್ಯ ಇದೆಯೆಂಬುದನ್ನು ಮನಗಂಡಿದ್ದೇನೆ. ನಾನೇ ಸ್ವತ: ನೋಡಿದ್ದೇನೆ. ರಾಷ್ಟ್ರೀಕರಣವಾದ ರಸ್ತೆಗಳಿಗೆ ಮೊದಲು ಆಧ್ಯತೆಯನ್ನು ಕೊಟ್ಟು ಬಸ್ ನಿಲ್ದಾಣಗಳನ್ನು ಮಾಡಬೇಕಾಗುತ್ತದೆ, ಬಿ.ಸಿ.ರೋಡ್ ಮಹತ್ವವಾದ ಸ್ಥಳವಾಗಿದೆ, ಆದಷ್ಟು ಇದಕ್ಕೆ ಆಧ್ಯತೆಯನ್ನು ಕೊಟ್ಟು ಇಲ್ಲಿ ಬಸ್ ನಿಲ್ದಾಣವನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತೇನೆ.

೩. ಗ್ರಂಥಾಲಯಂ ಇಲಾಖೆ ನಿರ್ದೇಶಕರ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ

SRI M. L. USTAD (Bijapur).—For the last six years the post of Director of Public Libraries is either in the additional charge of Deputy Secretary, Education or incharge of officers from other department on depution. Thus the Government has systematically blocking the only avenue for the promotion of departmental officers though there is no such provision in the Karnataka Public Libraries Act 1965. This has resulted is stagnation of the departmental activities and has created frustration among the officers. I request the Government to set right the things and do justice to department as well as to the officers by appointing the departmental officer as the Director when the present Director who is holding that post on deputation completes his term on 8-4-1986.

I once again request the Government to give positive assurance in this regard.

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ಗ್ರಂಥಾಲಯ ಇಲಾಖೆಯಲ್ಲಿ ಭರ್ತಿ ಮಾಡುವ ಸಲುವಾಗಿ ವಿಷಯ ಪ್ರಸ್ತಾಪ ಮಾಡಿದ್ದಾರೆ. ನಿಯಮಾವಳಿಗಳ ಪ್ರಕಾರ ಇದನ್ನು ಸರಿಮಾಡುತ್ತೇನೆಂದು ಹೇಳುತ್ತೇನೆ.

೪. ಮುದ್ದೇಬಿಹಾಳ ತಾಲ್ಲೂಕಿನಲ್ಲಿ ವಿಶೇಷ ರೀತಿಯ ರೋಗ ಹರಡಿರುವ ಬಗ್ಗೆ

ಶ್ರೀ ಜಿ. ರಾಜುಗೌಡ (ಹನೂರು) —ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಬಳಗನಾಡು ಗ್ರಾಮದಲ್ಲಿ ಆಶ್ಚರ್ಯಕರವಾದ ರೀತಿಯಲ್ಲಿ ವೃಷಣಬಾತು ರೋಗ ಕಾಣಿಸಿಕೊಂಡಿದೆ. ಈ ರೋಗ ಮೂರು ವರ್ಷಗಳ ಹಿಂದೆ ಕಾಣಿಸಿಕೊಂಡಿದ್ದರೂ, ವೈದ್ಯಕೀಯ ಇಲಾಖೆ ಇದರ ಬಗ್ಗೆ ಗಮನಹರಿಸದೇ ಇರುವುದರಿಂದ, ಈ ರೋಗ ಉಲ್ಬಣಗೊಂಡು ಸುಮಾರು ೧೫೦ ಜನ ಈ ರೋಗದಿಂದ ಬಳಲುತ್ತಿದ್ದಾರೆ. ಇದು ಬಹಳ ತ್ವರಿತವಾಗಿ ಹರಡುತ್ತಿರುವುದರಿಂದ, ಇದಕ್ಕೆ ರಾಜ್ಯದ ಎಲ್ಲಾ ಗಂಡಸರೂ ಬಲಿಯಾಗಬಹುದು ಎಂಬ ಭಯ ಉಂಟಾಗಿದೆ. ಆದ್ದರಿಂದ ಇದನ್ನು ತಡೆಗಟ್ಟಲು ಸೂಕ್ತ ಚಿಕಿತ್ಸೆ ಮಾಡಿಸುವಂತೆ ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು) (ಮಾನ್ಯ ಆರೋಗ್ಯ ಸಚಿವರ ಪರವಾಗಿ).—ಅಧ್ಯಕ್ಷರೇ, ಇದನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ಉತ್ತರತಂದು, ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

೫. ಅಫಜಲ್‌ಪುರದ ಗ್ರಾಮ ಸಹಾಯಕರಿಗೆ ಹಣ್ಣೊಂದು ತಿಂಗಳಿನಿಂದ ಸಂಬಳ ಕೊಡದಿರುವ ಬಗ್ಗೆ

ಶ್ರೀ ಮಾಲೀಕಯ್ಯ ಗುತ್ತೇದಾರ್ (ಅಫಜಲ್‌ಪುರ್).—ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆ ಅಫಜಲ್‌ಪುರ ತಾಲೂಕಿನ ಗ್ರಾಮ ಸಹಾಯಕರಿಗೆ ಕಳೆದ ಹನ್ನೊಂದು ತಿಂಗಳಿಂದ ಸಂಬಳ ನೀಡದಿರುವುದಕ್ಕೆ ಕಾರಣವೇನು ? ಈ ರೀತಿ ಸಂಬಳ ನೀಡದಿದ್ದರಿಂದ ಗ್ರಾಮ ಸಹಾಯಕರಿಗೆ ತಮ್ಮ ಜೀವನ ನಿರ್ವಹಿಸಿಕೊಂಡು ಹೋಗಲು ತೊಂದರೆಯಾಗಿದೆ. ಆದ್ದರಿಂದ ಕೂಡಲೇ ಸರ್ಕಾರದವರು ಕ್ರಮ ಕೈಗೊಂಡು ಅಫಜಲ್‌ಪುರ ತಾಲೂಕಿನ ಗ್ರಾಮ ಸಹಾಯಕರಿಗೆ ಸಂಬಳ ಕೊಡಿಸಬೇಕೆಂದು ಒತ್ತಾಯಿಸಲು ಈ ಸೂಚನೆ ನೀಡುತ್ತಿದ್ದೇನೆ.

ಶ್ರೀ ಎಂ. ರಘುಪತಿ.—ಇದನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಉತ್ತರವನ್ನು ಒದಗಿಸಿಕೊಡುತ್ತೇನೆ.

ಅಧ್ಯಕ್ಷರು.—ಶ್ರೀ ಕೆ. ಬಿ. ಕೋಳಿವಾಡ್ ಅವರು ಸಭೆಯಲ್ಲಿಲ್ಲ. ಬಿ. ಸ್ವಾಮಿರಾವ್ ಅವರು ತಮ್ಮ ಸೂಚನೆಯನ್ನು ಓದಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಗುತ್ತೇದಾರ್ ಅವರು ಹೇಳಿದುದನ್ನು ಸೀರಿಯಸ್ಸಾಗಿ ತೆಗೆದುಕೊಳ್ಳಬೇಕು. ರೆವೆನ್ಯೂ ಡಿಪಾರ್ಟ್‌ಮೆಂಟ್‌ಗೆ ಹಣ ರಿಲೀಸ್ ಮಾಡಿದ್ದೇವೆಂದು ಹೇಳಿದರು. ಇದುವರೆಗೂ ರಿಲೀಸ್ ಮಾಡಿಲ್ಲ, ೧೧ ತಿಂಗಳು ಆಯಿತು.

ಶ್ರೀ ಎಂ. ರಘುಪತಿ.—ನೋಟ್ ಮಾಡಿಕೊಂಡು, ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ಉತ್ತರ ತರಿಸಿಕೊಡಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಮಾತಾಡಿದ್ದೂ ಆಯಿತು. ಇನ್ನೂ ಬಂದಿಲ್ಲ.

ಅಧ್ಯಕ್ಷರು.—ಉತ್ತರವನ್ನು ತರಿಸಿಕೊಡುತ್ತೇನೆ.